


ಯುದ್ಧ ಸಜ್ಜಾಗಿರುವುದನ್ನ ಧರ್ಮರಾಜ ನೋಡಿದ. ಎರಡೂ ಕಡೆಯ ಸೇನೆ ಸಾಗರದ ಹಾಗೆ ಮೊರೆಯುತ್ತಾ ನಿಂತಿತ್ತು.

ಕವಚ ಕಳಚಿದ, ಆಯುಧವನ್ನು ಕೆಳಗಿಟ್ಟ ರಥದಿಂದ ಸರ್‍ರನೆ ಇಳಿದ ಕೈ ಮುಗಿದುಕೊಂಡು ಬರಿಯ ಕಾಲಲ್ಲಿ ಶತ್ರು ಸೇನೆಯ ಕಡೆಗೆ ನಡೆದ.

ಅವನು ಇಳಿದದ್ದು ನೋಡಿ ಕುಂತಿಯ ಮಗ ಧನಂಜಯ ರಥದಿಂದಿಳಿದು ಸೋದರನ ಕೂಡಿಕೊಂಡ. ಅವನ ಬೆನ್ನ ಹಿಂದೆ ಭಗವಂತನಾದ ವಾಸುದೇವನೂ ಹೊರಟ. ಉಳಿದ ರಾಜರೂ ಬೇಗ ಬೇಗ ಅವರ ಹಿಂದೆ ಹೆಜ್ಜೆ ಹಾಕಿದರು.

**ಅರ್ಜುನ:** ಯಾಕೆ? ಏನೆಂದುಕೊಂಡಿದೀಯ, ನಮ್ಮನ್ನೆಲ್ಲಾ ಕೈ ಬಿಟ್ಟು ಬರಿಯ ಕಾಲಲ್ಲೆ ಹಗೆಯ ಕಡೆಗೆ ನಡೆಯುತ್ತಿದೀಯಲ್ಲಾ!

**ಭೀಮ:** ಎಲ್ಲಿಗೆ ಹೊರಟೆ ರಾಜಾ, ಕವಚ ಆಯುಧ ಎಲ್ಲವನ್ನೂ ಕಳಚಿಟ್ಟು ತಮ್ಮಂದಿರನ ತೊರೆದುಬಿಟ್ಟು ಕವಚ ತೊಟ್ಟು ಆಯುಧ ಹಿಡಿದು ನಿಂತಿರುವ ಆ ಶತ್ರುಗಳ ಕಡೆಗೆ.

**ನಕುಲ:** ನೀನು! ನಮ್ಮಣ್ಣ! ಹೀಗೆ ಹೋಗುತ್ತಾ ಇರುವುದನ್ನು ನೋಡಿ ನನ್ನ ಗುಂಡಿಗೆ ಭಯದಿಂದ ಬಡಿದುಕೊಳ್ಳುತ್ತಿದೆ. ಎಲ್ಲಿಗೆ? ಎಲ್ಲಿಗೆ ಎಂದು ಹೇಳಲ್ಲವಾ?

**ಸಹದೇವ:** ಈ ಯುದ್ಧ ಎಂದರೇನೇ ಆತಂಕ. ಎಲ್ಲ ತೊರೆದು ಹಾಕಿ ಹಗೆಗಳ ಕಡೆಗೆ ಯಾಕೆ ಹೋಗುತ್ತಿದೀಯಾ!

ಹೀಗೆ ತಮ್ಮಂದಿರು ಪರಿಪರಿಯಾಗಿ ಮಾತಾಡುತ್ತಿದ್ದರೂ ಯುಧಿಷ್ಠಿರ ಬಾಯಿ ತೆರೆಯದೆ ಹೋಗುತ್ತಲೇ ಇದ್ದ. ಈ ಕಡೆ ಇಡೀ ಸೇನೆ ಎವೆ ಅಲುಗಿಸದೆ ಯುಧಿಷ್ಠಿರನನ್ನೇ ನೋಡುತ್ತಿದೆ. ಆ ಕಡೆ ಹಾಹಾಕಾರ ಈ ಕಡೆ ನಿಶ್ಶಬ್ದ.

ಯುಧಿಷ್ಠಿರನನ್ನು ದೂರದಿಂದಲೇ ನೋಡಿದ ಕೌರವನ ಸೈನಿಕರು 'ಹೆದರಿಕೊಂಡಿರುವುದು ಎದ್ದುಕಾಣುತ್ತದೆ ಅದೋ ಆ ಕುಲಗೇಡಿ ಭೀಷ್ಮನ ಹತ್ತಿರಕ್ಕೆ ತಮ್ಮಂದಿರನ್ನ ಕರಕೊಂಡು ಶರಣಾಗುವುದಕ್ಕೆ ಬರತಾ ಇದಾನೆ' ಎಂದು ಮಾತಾಡಿಕೊಳ್ಳಲು ಶುರು ಮಾಡಿದರು.

ಅಲ್ಲಾ, ಧನಂಜಯ ಇದಾನೆ, ತೋಳದ ಹಸಿವಿನ ವೃಕೋದರ ಇದಾನೆ, ನಕುಲ ಇದಾನೆ ಸಹದೇವ ಇದಾನೆ. ಈ ಪಾಂಡವನಿಗೆ ಭಯ ಯಾಕೆ ಬಂತು? ನಿಜಕ್ಕೂ ಇವನು ಲೋಕವೆಲ್ಲಾ ಕೊಂಡಾಡುವ ಕ್ಷತ್ರಿಯ ಕುಲದಲ್ಲಿ ಹುಟ್ಟಿಲ್ಲ. ಯುದ್ಧ ಕಂಡು ಇವನ ಗುಂಡಿಗೆ ಹೆದರಿಕೊಂಡಿದೆ, ಇವನು ಅಲ್ಪ ಸತ್ವ.

ಸೈನಿಕರಿಗೆಲ್ಲಾ ಹಿಗ್ಗು. ಕೌರವನನ್ನು ಹೊಗಳಲು ಶುರು ಮಾಡಿದರು. ಆ ಖುಷಿಯಲ್ಲಿ ತಮ್ಮ ಬಟ್ಟೆಯನ್ನೇ ಕಳಚಿ ಕುಣಿಯಲು ಶುರು ಮಾಡಿದರು. ಆ ಯೋಧರು ಆ ಅಣ್ಣ ತಮ್ಮಂದಿರನ್ನು ಅದರಲ್ಲೂ ಯುಧಿಷ್ಠಿರನನ್ನು ಜೊತೆಗೆ ಕೃಷ್ಣನನ್ನೂ ಬಿಡದೆ ಹೀಯಾಳಿಸಲು ತೊಡಗಿದರು. ಹೀಗೆ ಯುಧಿಷ್ಠಿರನಿಗೆ ಜೋರಾಗಿ ಧಿಕ್ಕಾರ ಹಾಕಿದ ಕೌರವನ ಸೈನ್ಯ ಇದ್ದಕ್ಕಿದ್ದ ಹಾಗೆ ನಿಶ್ಶಬ್ದವಾಯಿತು.

***

ಅಲ್ಲ, ಈ ರಾಜ ಭೀಷ್ಮನ ಜತೆ ಏನು ಮಾತಾಡುತ್ತಾನೆ. ಭೀಷ್ಮ ಅದಕ್ಕೆ ಏನು ಬದಲು ಹೇಳುತ್ತಾನೆ. ಯುದ್ಧೋನ್ಮಾದದ ಭೀಮ ಏನು ಹೇಳುತ್ತಾನೆ ಕೃಷ್ಣ ಧನಂಜಯರು ಏನು ಹೇಳುತ್ತಾರೆ? ಏನು ಮಾತಾಗುತ್ತದೆ ಎಂಬುದೇ ಎರಡೂ ಸೇನೆಯ ನಡುವೆ ದೊಡ್ಡ ಸಂಶಯವಾಗಿ ಹೋಯಿತು.

ಯುಧಿಷ್ಠಿರ ಏನು ಹೇಳಬೇಕು ಎಂದಿದ್ದಾನೆ?

ಬಿಲ್ಲು ಬಾಣ ತುಂಬಿದ ಶತ್ರು ಸೇನೆಯ ಒಳಗಿಂದ ಹಾದುಕೊಂಡು ತಮ್ಮಂದಿರೊಡನೆ ಭೀಷ್ಮನ ಕಡೆಗೇ ಹೊರಟ. ಯುದ್ಧಕ್ಕೆ ಕಾದು ಕೂತ ಆ ಶಂತನುವಿನ ಮಗ ಭೀಷ್ಮನ ಪಾದಗಳನ್ನು ಬಲವಾಗಿ ಹಿಡಿದುಕೊಂಡು—

**ಯುಧಿಷ್ಠಿರ:** ಪಿತಾಮಹ, ನೀನು ದುರ್ಗಮನಾದವನು. ನಿನ್ನ ಜತೆ ಯುದ್ಧ ಮಾಡಬೇಕಿದೆ, ಅನುಮತಿ ಕೊಡು. ಜತೆಗೆ ನಮಗೆ ಆಶೀರ್ವಾದ ಮಾಡು.

**ಭೀಷ್ಮ:** ನೀನೇನಾದರೂ ನನ್ನ ಹತ್ತಿರ ಬರದೇ ಹೋಗಿದ್ದರೆ ನಿನಗೆ ಸೋಲಿನ ಶಾಪ ಕೊಟ್ಟು ಬಿಡುತ್ತಿದ್ದೆ. ತೃಪ್ತಿಯಾಯಿತು ಈಗ, ಯುದ್ಧ ತೊರೆಯುವುದೊಂದು ಬಿಟ್ಟು ಬೇರೆ ಏನು ಬೇಕು ಕೇಳು. ಏನು ಆಸೆ ಇದೆ ಹೇಳಿಕೋ, ವರ ಕೇಳಿಕೋ. ಏನು ಬೇಕಾದರೂ ಕೇಳಿಕೋ. ಈ ಪರಿಸ್ಥಿತಿಯಲ್ಲಿ ನಿನಗೆ ಸೋಲಂತೂ ಇಲ್ಲ ಬಿಡು.

ಮಗು, ಕೌರವನ ಉಪ್ಪಿನ ಋಣಕ್ಕೆ ಬಂಧಿಯಾಗಿ ಬಿಟ್ಟಿದೇನೆ. ಗಂಡಸು ಹಣಕ್ಕೆ ಗುಲಾಮ. ಹಣ ಯಾರ ಗುಲಾಮನೂ ಅಲ್ಲ. ಅದರಿಂದ ನಾನು ಹೀಗೆ ಷಂಡನ ಥರ ಮಾತಾಡುತ್ತಿದ್ದೇನೆ. ಋಣದ ಭಾರದಿಂದ ನಾನು ಕೌರವನ ದಾಸ.

**ಯುಧಿಷ್ಠಿರ:** ನೀನು ಕೌರವನ ಜತೆಯಲ್ಲೇ ಇರು. ಅವನಿಗೋಸ್ಕರವೇ ಯುದ್ಧ ಮಾಡು. ಆದರೆ ನಮ್ಮ ಹಿತವನ್ನೇ ಸದಾ ಚಿಂತೆ ಮಾಡು ಅಷ್ಟು ಸಾಕು.

**ಭೀಷ್ಮ:** ಅದು ಹೇಗೆ ಸಾಧ್ಯ? ಅವರಿಗೋಸ್ಕರ ಯುದ್ಧ ಮಾಡುತ್ತಿದ್ದೇನೆ ನಿಮ್ಮ